ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತೇನೆ.

೨. ರಾಜ್ಯದಲ್ಲಿ ಹತ್ತಿ ಬೆಳೆಗಾರರಿಗೆ ತೊಂದರೆಯಾಗಿರುವುದು

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಹತ್ತಿ ಬೀಜ ಬೆಳೆಗಾರರು ತಾವು ಬೆಳೆದ ಹತ್ತಿಯನ್ನು ಜಿನ್ನಿಂಗ್ ಮಾಡಿಸಲು ದೂರದ ಸ್ಥಳಗಳಿಗೆ ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ. ಯಾವ ಗ್ರಾಮದಲ್ಲಿ ಹತ್ತಿ ಬೆಳೆಯ ಪ್ಲಾಟುಗಳು ಹೆಚ್ಚಾಗಿವೆಯೋ ಆ ಗ್ರಾಮದಲ್ಲಿ ಜಿನ್ನಿಂಗ್ ಸೌಲಭ್ಯವಿದ್ದರೂ ಕೂಡ ಬೇರೆ ಗ್ರಾಮಕ್ಕೆ ಹೋಗಿ ಜಿನ್ನಿಂಗ್ ಮಾಡಿಸಲು ಕರ್ನಾಟಕ ರಾಜ್ಯ ಬೀಜ ನಿಗಮದ ಅಧಿಕಾರಿಗಳು ಆದೇಶ ನೀಡಿದ್ದಾರೆ. ಇದೊಂದು ಅವ್ಯವಹಾರಿಕ ಅಧಿಕಾರಶಾಹಿ ಕ್ರಮವಾಗಿದೆ.

ಉದಾ.—ನರಗುಂದ ತಾಲ್ಲೂಕ್ ಬೀಜ ಬೆಳೆಗಾರರಿಗೆ ಕೇಂದ್ರವನ್ನು ಹುಬ್ಬಳ್ಳಿಗೆ ಕೊಡಲಾಗಿದೆ.

ಜಿನ್ನಿಂಗ್ ಮಾಡಿಸಲು ರೈತರಿಗೆ ಇರುವ ತೊಂದರೆಗಳನ್ನು ವಿವರಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಕೂಡಲೇ ತಿಳಿದಿದ್ದರೂ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಜಿನ್ನಿಂಗ್ ಕೇಂದ್ರಗಳಿಗೆ ಅನುಮತಿ ನೀಡಲಾಗಿದೆ.

ಜಿನ್ನಿಂಗ್ ಸಲುವಾಗಿ ಇನ್ನೊಂದು ಊರಿಗೆ ಬಲಸೆ ಹೋಗುವ ಪರಿಸ್ಥಿತಿಯನ್ನು ಉಂಟು ಮಾಡಿರುವುದರಿಂದ ಕೃಷಿ ಕಾರ್ಮಿಕರನ್ನು ಪಡೆಯುವಲ್ಲಿ ಕೂಡ ತೊಂದರೆಯಾಗಿದೆ.

ಇಷ್ಟಿದ್ದರೂ ಕೂಡಾ ಆರ್ಥಿಕ ಪಾಪಿ ಆಗುವುದೆನ್ನುವ ಚಿಂತೆಯಿಂದ ರೈತರು ಸುಧಾರಿಸಿಕೊಂಡು ನಡೆದಿರುವುದು ಎಲ್ಲವೂ ಸರಿಯಾಗಿ ನಡೆದಿದೆ ಎಂದು ತಿಳಿದುಕೊಂಡರೆ ಅಧಿಕಾರಿಗಳದೇ ತಪ್ಪು ಅಭಿಪ್ರಾಯವಾಗುತ್ತದೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—ಹತ್ತಿ ಬೀಜ ಉತ್ಪಾದನೆಯನ್ನು ಕರ್ನಾಟಕ ರಾಜ್ಯ ಬೀಜ ನಿಗಮವು ರೈತರ ಮೂಲಕ ತೆಗೆದುಕೊಳ್ಳುತ್ತಿದೆ. ೧೯೮೬-೮೭ರ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ರಾಜ್ಯದ ೧೩ ಜಿಲ್ಲೆಗಳಲ್ಲಿ ತೆಗೆದುಕೊಳ್ಳಲಾಗಿದೆ. ಹತ್ತಿ ಬೀಜೋತ್ಪಾದನೆಯಲ್ಲಿ ವೈವಿಧ್ಯತೆಯಿಂದ ಕೊನೆಯ ಹಂತದವರೆಗೂ ಬಹಳ ಜಾಗರೂಕತೆ ವಹಿಸಬೇಕಾಗಿರುತ್ತದೆ. ಈ ಕಾರಣದಿಂದ ಹತ್ತಿ ಅರೆದು ಸ್ವಚ್ಛ ಮಾಡಿದ ಬೀಜದ ಮಾದರಿಯನ್ನು ತೆಗೆಯುವಾಗ ಕರ್ನಾಟಕ ರಾಜ್ಯ ಬೀಜ ನಿಗಮ ಮತ್ತು ಕರ್ನಾಟಕ ರಾಜ್ಯ ಬೀಜ ಪ್ರಮಾಣ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಾಗಿರಬೇಕಾಗಿರುತ್ತದೆ. ಈ ಸಂಸ್ಥೆಗಳಲ್ಲಿ ದೊರೆಯುವ ಸಿಬ್ಬಂದಿ ಮತ್ತು ಹತ್ತಿ ಬೀಜೋತ್ಪಾದನಾ ಕ್ಷೇತ್ರವನ್ನು ಪರಿಗಣನೆಗೆ ತೆಗೆದುಕೊಂಡು ಯಾವ ಯಾವ ಕೇಂದ್ರಗಳಲ್ಲಿ ಹತ್ತಿಯನ್ನು ಅರಿಯಬೇಕೆಂದು ನಿರ್ಧರಿಸಲಾಗುತ್ತದೆ.

ಕಳೆದ ವರ್ಷದ ಅನುಭವ, ಈ ವರ್ಷದ ವಿಸ್ತೀರ್ಣ ಮತ್ತು ಸಿಬ್ಬಂದಿಯ ದೊರೆಯುವಿಕೆಯನ್ನು ಗಣನೆಗೆ ತೆಗೆದುಕೊಂಡು ರೋಣ ತಾಲ್ಲೂಕಿನಲ್ಲಿ ಮೂರು ಕಡೆ ಜಿನ್ನಿಂಗ್ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಇದೇ ರೀತಿ ಉಳಿದ ತಾಲ್ಲೂಕ್‌ಗಳಲ್ಲಿಯೂ ಸಹ ಮೇಲೆ ತಿಳಿಸಿದ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಹತ್ತಿ ಅರೆಯುವ ಸ್ಥಳಗಳನ್ನು ಗುರುತಿಸಿ ಆಯ್ಕೆ ಮಾಡಲಾಗಿದೆ. ಮತ್ತು ಮತ್ತು ನರಗುಂದ ನವಲಗುಂದ ಮತ್ತು ಧಾರವಾಡ ತಾಲ್ಲೂಕ್‌ಗಳಲ್ಲಿ ಇರತಕ್ಕಂಥ ಬೆಳೆಗಾರರನ್ನು ಗಣನೆಗೆ ತೆಗೆದುಕೊಂಡು ಹತ್ತಿಯನ್ನು ಒಂದೇ ಸ್ಥಳವಾದ ಹುಬ್ಬಳ್ಳಿಯಲ್ಲಿ ದೊರೆಯುವುದರಿಂದ ಹುಬ್ಬಳ್ಳಿ ಕೇಂದ್ರವನ್ನು ನೇಮಕ ಮಾಡಲಾಗಿದೆ. ಈ ತರಹ ಮಾಡದೇ ಹೋಗಿದ್ದರೆ, ರೈತರು ಮೇಲಿನ ಕಾರ್ಯಕ್ರಮಗಳಿಗೆ ಒದ್ದಕ್ಕಿಂತ ಹೆಚ್ಚಿನ ಕೇಂದ್ರಗಳಿಗೆ ಬೀಜವನ್ನು ಸಾಗಿಸಬೇಕಾದ ಪ್ರಸಂಗಗಳು ಬರುತ್ತವೆ.

ಈ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಸಲಹೆಗಳನ್ನು ಕೊಟ್ಟರೆ ಅದನ್ನು ಮುಂದಿನ ಸಲ ಕಾರ್ಯರೂಪಕ್ಕೆ ತರುತ್ತೇವೆ.